ದೇವಸ್ಥಾನದ ಆದಾಯವನ್ನು ಆಯಾಯ ದೇವಸ್ಥಾನದ ಪೂಜಾ ಕೈಂಕಾರ್ಯಕ್ಕಾಗಿ ಹಾಗೂ ದೇವಸ್ಥಾನದ ಅಭಿವೃದ್ಧಿ ಕಾಮಗಾರಿಗಳಿಗೆ ಹಾಗೂ ದೇವಸ್ಥಾನಕ್ಕೆ ಬರುವ ಭಕ್ತಾದಿಗಳಿಗೆ ಮೂಲಭೂತ ಸೌಲಭ್ಯ ಕಲ್ಪಿಸಲು ಮತ್ತು ನಿಯಮಾವಳಿಯಂತೆ, ಧರ್ಮ, ಸಂಸ್ಕೃತಿ, ಶಿಕ್ಷಣ ಮುಂತಾದ ಉದ್ದೇಶಗಳಿಗಾಗಿ ಮಾತ್ರ ಬಳಕೆ ಮಾಡಲು ಅವಕಾಶವಿರುತ್ತದೆ.

ರಾಜ್ಯದ ವಿದ್ಯುತ್ ಕಂಪನಿಗಳಲ್ಲಿ ನೀಡಿದ್ದ ಠೇವಣಿ ಹಣ ನಷ್ಟವಾಗಿರುವುದು

165 (500) ಕುಮಾರಸ್ವಾಮಿ ಹೆಚ್.ಕೆ. (ಸಕಲೇಶಪುರ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ವಿದ್ಯುತ್ ಕಂಪನಿಯಲ್ಲಿ 2007–08ನೇ ಸಾಲಿನಲ್ಲಿ ನಿಶ್ಚಿತ ಠೇವಣಿ ಇಟ್ಟ ಹಣವೆಷ್ಟು; ಹಾಗೂ ಠೇವಣಿ ಇಟ್ಟ ಹಣವನ್ನು ನಷ್ಟ ಮಾಡಲು ಕಾರಣಗಳೇನು; 2008–09 ಹಾಗೂ 2009–10ನೇ ಸಾಲಿನಲ್ಲಿ ನಷ್ಟವುಂಟಾಗಿರುವ ಮೊತ್ತವೆಷ್ಟು; ಈ ನಷ್ಟವುಂಟಾಗಲು ಕಾರಣಗಳೇನು (ಕಳೆದ 3 ವರ್ಷಗಳ ಪೂರ್ಣ ಮಾಹಿತಿ ನೀಡುವುದು);

ಆ) 2009–10ನೇ ಸಾಲಿನಲ್ಲಿ ನಷ್ಟವುಂಟಾಗಿರುವ ಮೊತ್ತವೆಷ್ಟು; ಈ ನಷ್ಟವುಂಟಾಗಲು ಕಾರಣಗಳೇನು (ಕಳೆದ 3 ವರ್ಷಗಳ ಪೂರ್ಣ ಮಾಹಿತಿ ನೀಡುವುದು);

ಇ) ಗುಲ್ಬರ್ಗಾ ವಿದ್ಯುತ್ ಕಂಪನಿಯಲ್ಲಿ 2007–08, 2008–09 ಹಾಗೂ 2009–10ನೇ ಸಾಲಿನಲ್ಲಿ ನಷ್ಟವುಂಟಾಗಿರುವ ಮೊತ್ತವೆಷ್ಟು; ಈ ನಷ್ಟವುಂಟಾಗಲು ಕಾರಣಗಳೇನು (ಕಳೆದ 3 ವರ್ಷಗಳ ಪೂರ್ಣ ಮಾಹಿತಿ ನೀಡುವುದು);

ಈ) ಚಾಮುಂಡಿ ವಿದ್ಯುತ್ ಕಂಪನಿಯಲ್ಲಿ 2007–08, 2008–09 ಹಾಗೂ 2009–10ನೇ ಸಾಲಿನಲ್ಲಿ ನಷ್ಟವುಂಟಾಗಿರುವ ಮೊತ್ತವೆಷ್ಟು; ಈ ನಷ್ಟವುಂಟಾಗಲು ಕಾರಣಗಳೇನು (ಕಳೆದ 3 ವರ್ಷಗಳ ಪೂರ್ಣ ಮಾಹಿತಿ ನೀಡುವುದು);

ಉ) ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯಲ್ಲಿ 2007–08, 2008–09 ಹಾಗೂ 2009–10ನೇ ಸಾಲಿನಲ್ಲಿ ನಷ್ಟವುಂಟಾಗಲು ಮೊತ್ತವೆಷ್ಟು, ಈ ನಷ್ಟವುಂಟಾಗಲು ಕಾರಣಗಳೇನು (ಕಳೆದ 3 ವರ್ಷಗಳ ಪೂರ್ಣ ಮಾಹಿತಿ ನೀಡುವುದು);

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ 2007–08 ನೇ ಸಾಲಿನ ವಾರ್ಷಿಕ ವರದಿಯಲ್ಲಿರುವಂತೆ, 2007–08ನೇ ಸಾಲಿನ ಅಂತ್ಯದಲ್ಲಿ ರೂ.318.03 ಕೋಟಿಗಳ ನಿಶ್ಚಿತ ಠೇವಣಿ ಇದ್ದಿತ್ತು. 2008–09ನೇ ಸಾಲಿನಲ್ಲಿ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯು ಹೆಚ್ಚಿನ ದರದಲ್ಲಿ ವಿದ್ಯುತ್ ಖರೀದಿ ಮಾಡಿದ್ದರಿಂದ ಸದರಿ ಮೊತ್ತವನ್ನು ಬಳಸಿಕೊಳ್ಳ ಲಾಗಿರುತ್ತದೆ.

2008–09ನೇ ಸಾಲಿನ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ ವಾರ್ಷಿಕ ವರದಿಯ ಪ್ರಕಾರ ರೂ.588.24 ಕೋಟಿಗಳಷ್ಟು ನಷ್ಟವುಂಟಾಗಿರುತ್ತದೆ. 2009–10ನೇ ಸಾಲಿನಲ್ಲಿ ರೂ.791.74 ಕೋಟಿಗಳ ಅಂದಾಜು ನಷ್ಟವನ್ನು ವಿದ್ಯುತ್ ನಿಯಂತ್ರಣ ಆಯೋಗವು ಅನುಮೋದಿಸಿದ್ದು, ವಿದ್ಯುತ್ ದರ ಪರಿಷ್ಕರಣೆಯಿಂದ (ಉಳಿದಿರುವ 3 ತಿಂಗಳಿಗೆ) ರೂ.134.50 ಕೋಟಿಗಳನ್ನು ನಿರೀಕ್ಷಿಸಲಾಗಿದೆ ಮತ್ತು ರೂ.253.73 ಕೋಟಿಗಳನ್ನು ಹೆಚ್ಚುವರಿ ಅನುದಾನವಾಗಿ ಸರ್ಕಾರದಿಂದ ಪಡೆಯಲು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ಆದೇಶಿಸಿದೆ. ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ರೂ.403.50 ಕೋಟಿಗಳ ನಷ್ಟವನ್ನು ಅಂದಾಜು ಮಾಡಲಾಗಿದೆ.

ನಷ್ಟಕ್ಕೆ ಮುಖ್ಯ ಕಾರಣಗಳು ಕೆಳಕಂಡಂತಿವೆ :–

2008–09ನೇ ಸಾಲಿನ ನಷ್ಟಕ್ಕೆ ಹೆಚ್ಚಿನ ದರದಲ್ಲಿ ವಿದ್ಯುತ್ ಖರೀದಿ ಮಾಡಿದ್ದರಿಂದ ಉಂಟಾಗಿದ್ದು, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ಸದರಿ ಮೊತ್ತವನ್ನು ಗ್ರಾಹಕರಿಗೆ ವರ್ಗಾಯಿಸಲು ನಿರಾಕರಿಸಿದೆ. ಸದರಿ ನಷ್ಟದ ಮೊತ್ತವು ರಾಜ್ಯ ಸರ್ಕಾರವು ಉಚಿತ ವಿದ್ಯುತ್ ನೀಡುತ್ತಿರುವ ರೈತರ ಪಂಪುಸೆಟ್ಟುಗಳಿಂದ ಉಂಟಾಗಿದೆಯೆಂದು ಆಯೋಗವು ತೀರ್ಮಾನಿಸಿ ರುವುದರಿಂದ ಸದರಿ ಮೊತ್ತವನ್ನು ರಾಜ್ಯ ಸರ್ಕಾರವು ಭರಿಸಬೇಕೆಂದು ಆದೇಶಿಸಿದೆ. ಈ ಆದೇಶದ ಬಗ್ಗೆ ರಾಜ್ಯ ಸರ್ಕಾರವು ನಿಯಂತ್ರಣ ಆಯೋಗದ ಆದೇಶವನ್ನು ಪುನಃ ಪರಿಶೀಲನೆ ಮಾಡಬೇಕೆಂದು ದಿನಾಂಕ: 25–2–2010 ರಲ್ಲಿ ಪರಿಶೀಲನಾ ಅರ್ಜಿಯನ್ನು ಸಲ್ಲಿಸಿದೆ.

2007–08 ಮತ್ತು 2008–09ರ ವರ್ಷಗಳಲ್ಲಿ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಗೆ ಉಂಟಾಗಿರುವ ಲಾಭ/ನಷ್ಟದ ವಿವರಗಳು ಕೆಳಕಂಡಂತಿವೆ:

ಆರ್ಥಿಕ ವರ್ಷ	ಗಳಿಸಿದ ಲಾಭ / ನಷ್ಟ ರೂ. ಕೋಟಿಗಳಲ್ಲಿ
2007–08	12.57
2008–09	(–) 588.24 (ನಷ್ಟ)

ಆ) ರೂ.41.33 ಕೋಟಿಯಷ್ಟು ನಷ್ಟ ಉಂಟಾಗಿರುತ್ತದೆ. ಹೆಚ್ಚಿನ ದರದ ವಿದ್ಯುತ್ ಖರೀದಿಯಿಂದ ಮತ್ತು 2005ನೇ ಟ್ಯಾರಿಫ್ ದರವು 2008–09ರಲ್ಲಿ ಪರಿಷ್ಕೃತಗೊಳ್ಳದೇ ಇರುವುದು ಈ ನಷ್ಟಕ್ಕೆ ಮುಖ್ಯ ಕಾರಣವಾಗಿದೆ.

2009–10ನೇ ಸಾಲಿನ ಆರ್ಥಿಕ ವರ್ಷವು ಇನ್ನೂ ಅಂತ್ಯಗೊಳ್ಳ ಬೇಕಾಗಿರುತ್ತದೆ. ಪ್ರಸಕ್ತ ಸಾಲಿನ ಲಾಭ ನಷ್ಟವು ಸರ್ಕಾರವು ನೀಡುವ ಸಬ್ಸಿಡಿ ಮೊತ್ತದ ಮೇಲೆ ಅವಲಂಬಿತವಾಗಿದೆ. ಲಾಭ ನಷ್ಟದ ಕುರಿತು ಲೆಕ್ಕಾಚಾರವು ಆರ್ಥಿಕ ವರ್ಷ ಪೂರ್ಣಗೊಂಡ ನಂತರ ಮಾಡಬೇಕಾಗಿರುತ್ತದೆ.

ಇ) ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿಯಲ್ಲಿ 2007–08, 2008–09 ಮತ್ತು 2009–10ನೇ ಸಾಲಿನಲ್ಲಿ ಲಾಭ/ನಷ್ಟ ಉಂಟಾಗಿರುವ ಮೊತ್ತದ ವಿವರಗಳು ಈ ಕೆಳಗಿನಂತಿದೆ.

ಆರ್ಥಿಕ ವರ್ಷ	ಗಳಿಸಿದ ಲಾಭ / ನಷ್ಟ ರೂ. ಕೋಟಿಗಳಲ್ಲಿ
2007–08	3.12
2008–09	(–) 198.16 (ನಷ್ಟ)

2008–09ನೇ ಸಾಲಿನ ನಷ್ಟಕ್ಕೆ ಹೆಚ್ಚಿನ ದರದಲ್ಲಿ ವಿದ್ಯುತ್ ಖರೀದಿ ಮಾಡಿರುವುದು ಮತ್ತು ನೀಡಬೇಕಾಗಿದ್ದ ಸಹಾಯಧನದಲ್ಲಿ ಕಡಿತವಾಗಿ ರುವುದು ಮುಖ್ಯ ಕಾರಣವಾಗಿರುತ್ತದೆ.

2009–10ನೇ ಸಾಲಿನ ಆರ್ಥಿಕ ವರ್ಷವು ಇನ್ನೂ ಅಂತ್ಯಗೊಳ್ಳ ಬೇಕಾಗಿರುತ್ತದೆ. ಪ್ರಸಕ್ತ ಸಾಲಿನ ಲಾಭ ನಷ್ಟವು ಸರ್ಕಾರವು ನೀಡುವ ಸಬ್ಸಿಡಿ ಮೊತ್ತದ ಮೇಲೆ ಅವಲಂಬಿತವಾಗಿದೆ. ಲಾಭ ನಷ್ಟದ ಕುರಿತು ಲೆಕ್ಕಾಚಾರವು ಆರ್ಥಿಕ ವರ್ಷ ಪೂರ್ಣಗೊಂಡ ನಂತರ ಮಾಡಬೇಕಾಗಿರುತ್ತದೆ.

ಈ) 2007–08 ಮತ್ತು 2008–09ರ ವರ್ಷಗಳಲ್ಲಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮಕ್ಕೆ ಉಂಟಾಗಿರುವ ಲಾಭ/ನಷ್ಟದ ವಿವರಗಳು ಕೆಳಕಂಡಂತಿವೆ:–

ಆರ್ಥಿಕ ವರ್ಷ	ಗಳಿಸಿದ ಲಾಭ / ನಷ್ಟ ರೂ. ಕೋಟಿಗಳಲ್ಲಿ
2007–08	0.51
2008–09	(–) 221.0 (ನಷ್ಟ)

2008–09ನೇ ಸಾಲಿನ ನಷ್ಟಕ್ಕೆ ಹೆಚ್ಚಿನ ದರದಲ್ಲಿ ವಿದ್ಯುತ್ ಖರೀದಿ ಮಾಡಿರುವುದು ಮತ್ತು ನೀಡಬೇಕಾಗಿದ್ದ ಸಹಾಯಧನದಲ್ಲಿ ಕಡಿತವಾಗಿ ರುವುದು ಮುಖ್ಯ ಕಾರಣವಾಗಿರುತ್ತದೆ.

2009–10ನೇ ಸಾಲಿನ ಆರ್ಥಿಕ ವರ್ಷವು ಇನ್ನೂ ಅಂತ್ಯಗೊಳ್ಳ ಬೇಕಾಗಿರುತ್ತದೆ. ಪ್ರಸಕ್ತ ಸಾಲಿನ ಲಾಭ ನಷ್ಟವು ಸರ್ಕಾರವು ನೀಡುವ ಸಬ್ಸಿಡಿ ಮೊತ್ತದ ಮೇಲೆ ಅವಲಂಬಿತವಾಗಿದೆ. ಲಾಭ ನಷ್ಟದ ಕುರಿತು ಲೆಕ್ಕಾಚಾರವು ಆರ್ಥಿಕ ವರ್ಷ ಪೂರ್ಣಗೊಂಡ ನಂತರ ಮಾಡಬೇಕಾಗಿರುತ್ತದೆ.

ಉ) 2007–08 ಮತ್ತು 2008–09 ರ ವರ್ಷಗಳಲ್ಲಿ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಗೆ ಉಂಟಾಗಿರುವ ಲಾಭ/ನಷ್ಟದ ವಿವರಗಳು ಕೆಳಕಂಡಂತಿವೆ:–

ಆರ್ಥಿಕ ವರ್ಷ	ಗಳಿಸಿದ ಲಾಭ / ನಷ್ಟ ರೂ. ಕೋಟಿಗಳಲ್ಲಿ
2007–08	8.85
2008–09	(–) 560.25 (ನಷ್ಟ)

2008–09ನೇ ಸಾಲಿನ ನಷ್ಟಕ್ಕೆ ಹೆಚ್ಚಿನ ದರದಲ್ಲಿ ವಿದ್ಯುತ್ ಖರೀದಿ ಮಾಡಿರುವುದು ಮತ್ತು ಸರ್ಕಾರ ನೀಡಬೇಕಾಗಿದ್ದ ಸಹಾಯಧನದಲ್ಲಿ ಕಡಿತವಾಗಿರುವುದು ಹಾಗೂ ಹೆಸ್ಕಾಂ ಕಳೆದ ವರ್ಷಕ್ಕಿಂತ ರೂ.33.76 ಕೋಟಿಯಷ್ಟು ಹೆಚ್ಚಿಗೆ ಸಾಲದ ಮರುಪಾವತಿಯ ಮೇಲೆ ಬಡ್ಡಿಯನ್ನು ಪಾವತಿಸಿರುವುದು ಮುಖ್ಯ ಕಾರಣಗಳಾಗಿರುತ್ತವೆ.

2009–10ನೇ ಸಾಲಿನ ಆರ್ಥಿಕ ವರ್ಷವು ಇನ್ನೂ ಅಂತ್ಯಗೊಳ್ಳಬೇಕಾಗಿರುತ್ತದೆ. ಪ್ರಸಕ್ತ ಸಾಲಿನ ಲಾಭ ನಷ್ಟವು ಸರ್ಕಾರವು ನೀಡುವ ಸಬ್ಸಿಡಿ ಮೊತ್ತದ ಮೇಲೆ ಅವಲಂಬಿತವಾಗಿದೆ. ಲಾಭ ನಷ್ಟದ ಕುರಿತು ಲೆಕ್ಕಾಚಾರವು ಆರ್ಥಿಕ ವರ್ಷ ಪೂರ್ಣಗೊಂಡ ನಂತರ ಮಾಡಬೇಕಾಗಿರುತ್ತದೆ.

ವಿಜಯನಗರ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಪೊಲೀಸ್ ಠಾಣೆಗಳಲ್ಲಿ ಪೇದೆಗಳ ಕೊರತೆ

168 (477) ಶ್ರೀ ಎಂ.ಕೃಷ್ಣಪ್ಪ (ವಿಜಯನಗರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಯ ನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಪೊಲೀಸ್ ಠಾಣೆಗಳಲ್ಲಿ ಮಂಜೂರಾಗಿರುವ ಪೊಲೀಸ್ ಪೇದೆ/ಮುಖ್ಯ ಪೇದೆ ಹುದ್ದೆಗಳೆಷ್ಟು;

ಆ) ಕೊರತೆಯಿರುವ ಸಿಬ್ಬಂದಿಯಿಂದಾಗಿ ಕ್ಷೇತ್ರದ ವ್ಯಾಪ್ತಿಯಲ್ಲಿ ಪ್ರತಿದಿನ ಸರಗಳ್ಳತನ, ಮನೆಗಳ್ಳತನ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ ಹುದ್ದೆಗಳನ್ನು ತುಂಬಲು ಹಾಗೂ ಅಪರಾಧಗಳನ್ನು ತಡೆಯಲು ತೆಗೆದುಕೊಂಡಿರುವ ಕ್ರಮಗಳೇನು;

ಡಾ॥ ವಿ.ಎಸ್. ಆಚಾರ್ಯ (ಗೃಹ ಸಚಿವರು) :

ಅ) ಪೊಲೀಸ್ ಕಾನ್ಸ್‌ಟೇಬಲ್‌ಗಳ ಹುದ್ದೆಗಳು: 258 ಪೊಲೀಸ್ ಹೆಡ್‌ಕಾನ್ಸ್‌ಟೇಬಲ್‌ಗಳ ಹುದ್ದೆಗಳು:92

ಆ) ಇಲ್ಲ.

ಇ) ಖಾಲಿ ಇರುವ ಹುದ್ದೆಗಳನ್ನು ತುಂಬಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.